# ಸಂತರ ಜೀವನ ಪರೋಪಕಾರಕ್ಕಾಗಿ!

**ಕೊಕ್ಕಡ ವೆಂಕಟ್ರಮಣ ಭಟ್**

**ಒಂದು ಸುಭಾಷಿತದ ಮೂಲಕ ಪರೋಪಕಾರದ ಮಹತ್ವವನ್ನು ವಿವರಿಸಿರುವ ಮಾನ್ಯ ಲೇಖಕರು ಮಂಡ್ಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದಾರೆ.**

ಪದ್ಮಾಕರಂ ದಿನಕರೋ ವಿಕಚಂ ಕರೋತಿ
ಚಂದ್ರೋ ವಿಕಾಸಯತಿ ಕೈರವಚಕ್ರವಾಲಂ |
ನಾಭ್ಯರ್ಥಿತೋ ಜಲಧರೋಽಪಿ ಜಲಂ ದದಾತಿ
ಸಂತಃ ಸ್ವಯಂ ಪರಹಿತೇಷು ಕೃತಾಭಿಯೋಗಾಃ ||

ಮಾನವನ ಜೀವನದ ಪರಮೋದ್ದೇಶ ಪರೋಪಕಾರಕ್ಕಾಗಿ ಇದೆ. ಸಂತ-ಮಹಂತರು ತಮ್ಮ ಜೀವನಲಕ್ಷ್ಯವನ್ನು ಕಂಡವರಾಗಿ ತಮ್ಮ ಜೀವಿತವನ್ನು ಪರಾರ್ಥಕ್ಕಾಗಿಯೇ ಗಂಧದ ಕೊರಡಿನಂತೆ ತೇದು ಸುತ್ತೆಲ್ಲ ಪರೋಪಕಾರದ ಪರಿಮಳವನ್ನು ಹರಡುತ್ತಾರೆ. ಸುಭಾಷಿತಕಾರನು ಪ್ರಕೃತ ಶ್ಲೋಕದಲ್ಲಿ ಪ್ರಕೃತಿಯ ದೃಷ್ಟಾಂತ ಗಳಿಂದ ಪುಟ್ಟ ಬಾಲಕರ ಮನಸ್ಸನ್ನೂ ತೆರೆಯುವಂತೆ ಈ ವಿಷಯವನ್ನು ಸ್ಪಷ್ಟೀಕರಿಸುತ್ತಾನೆ.

ಸೂರ್ಯನು ಕಮಲಗಳ ಸಮೂಹವನ್ನು ಅರಳಿಸುತ್ತಾನೆ. ಚಂದಿರನು ನೈದಿಲೆಗಳ ಗುಂಪನ್ನು ವಿಕಾಸಗೊಳಿಸುತ್ತಾನೆ. ಯಾರೂ ಕೇಳದಿದ್ದರೂ ಜಲಧರ ಎಂದರೆ ಮೋಡಗಳು ತಂಪನೆಯ ಮಳೆ ಯನ್ನು ಸುರಿಸುತ್ತವೆ. ಮಹಾತ್ಮರು ಪರಪ್ರೇರೇಪಣೆ ಇಲ್ಲದೆ ತಾವಾಗಿಯೇ ತಮ್ಮನ್ನು ಪರಹಿತ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳುತ್ತಾರೆ.

**ಪರೋಪಕಾರಾರ್ಥಮಿದಂ ಶರೀರಮ್** ಎಂಬ ಶ್ಲೋಕವನ್ನು ಎಲ್ಲರೂ ಕೇಳಿದ್ದೇವೆ. ಸೂರ್ಯಚಂದ್ರರು ಹಗಲಿರುಳುಗಳನ್ನು ಬೆಳಗಲು ಯಾರ ಅಪ್ಪಣೆಗಾಗಿಯೂ ಕಾಯುವುದಿಲ್ಲ. ಯಾರ ಹುಟ್ಟು ಸಾವುಗಳನ್ನೂ ಗಣಿಸುವುದಿಲ್ಲ. ಲೋಕವನ್ನು ಬೆಳಗುವುದು ತಮ್ಮ ಸ್ವಧರ್ಮವೆಂದು ಕಾಲ ಮೀರದೆ ಮೂಡುತ್ತಾರೆ, ಮುಳುಗು ತ್ತಾರೆ. ಹಗಲಿರುಳುಗಳನ್ನುಂಟುಮಾಡುವ ಸೂರ್ಯನು ಪ್ರಕೃತಿಯ ಸೃಷ್ಟಿ ಸ್ಥಿತಿ ಲಯ ಕಾರ್ಯಗಳಲ್ಲಿ ಪ್ರಮುಖ ಕಾರಣನಾಗಿ "ತ್ರಯೀಮೂರ್ತಿರ್ದಿವಾಕರ" ನೆನ್ನಿಸಿಕೊಂಡಿದ್ದಾನೆ. ಇರುಳನ್ನು ಬೆಳದಿಂಗಳಿನಿಂದ ಬೆಳಗುವ "ರಜನೀಕಾಂತ"ನು ಷೋಡಶ ಕಲೆಗಳಿಂದ ಕೂಡಿದವನಾಗಿ ಶುಕ್ಲ-ಕೃಷ್ಣ ಪಕ್ಷಗಳನ್ನುಂಟು ಮಾಡುತ್ತ ಋತುಮಾನದ ಪರಿವರ್ತನೆಗೆ ಸಹಕರಿಸುತ್ತಾನೆ. ಚರಾಚರಗಳಿಗೆ ಉಪಕರಿಸುವ ಈ ಸೂರ್ಯಚಂದ್ರರು ಯಾರಿಂದಾದರೂ ಏನಾದರೂ ಫಲಾಪೇಕ್ಷೆ ಪಡೆಯುತ್ತಾರೆಯೇ? ಫಲಾಪೇಕ್ಷೆಯ ನಿರೀಕ್ಷೆಯಿಂದ ಏನೇ ಮಾಡಿದರೂ ಅದು ಪರ ಹಿತ ಎನ್ನಿಸಿಕೊಳ್ಳುವುದಿಲ್ಲ.

ತರುಲತೆಗಳು ಲೋಕಹಿತಕ್ಕಾಗಿಯೇ ಕುಡಿಯೊಡೆಯುತ್ತವೆ, ಚಿಗುರುತ್ತವೆ. ಹೂ ಮಿಡಿ ಕಾಯಿ ಹಣ್ಣುಗಳನ್ನು ಪ್ರತಿಫಲದ ನಿರೀಕ್ಷೆಯಿಲ್ಲದೆ ತಲೆಬಾಗಿ ಲೋಕಕ್ಕೆ ಸಮರ್ಪಿಸುತ್ತವೆ. ಕೆಚ್ಚಲು ತುಂಬ ಅಮೃತಸಮಾನ ಹಾಲನ್ನು ತುಂಬಿಕೊಂಡ ಗೋಮಾತೆ ಮಾನವರಿಗೆ ಉಪಕರಿಸುವ ಏಕೈಕ ಧ್ಯೇಯವನ್ನು ಆಜೀವಾಂತ ಸಾಧಿಸುತ್ತವೆ. ತಮ್ಮ ಸಂತತಿಗಾಗಿ ಅವು ಏನೇನನ್ನೂ ಬಚ್ಚಿಡು ವುದಿಲ್ಲ. ಸಾಕಿದೊಡೆಯನೊಬ್ಬನಿಗಾಗಿಯಲ್ಲ, ಲೋಕದ ಜನತೆಗೆಲ್ಲ ಹಾಲು ವಿತರಿಸುವ ಗೋಮಾತೆ ಕಾಮಧೇನು. ಅಜ್ಞಾತ ಕವಿಯೊಬ್ಬನ ಗೋವಿನ ಗೀತೆಯಲ್ಲಿ ಪರೋಪಕಾರದ ಸಾಕಾರಮೂರ್ತಿಯಾದ ಗೋವು "ನೀನಾರಿಗಾದೆಯೋ ಎಲೆ ಮಾನವಾ?" ಎಂದು ಕೇಳುವ ಪ್ರಶ್ನೆಯಿಂದ ಮನುಷ್ಯ ತನ್ನ ಜೀವಿತದ ಲಕ್ಷ್ಯದೆಡೆಗೆ ಗಮನ ಹರಿಸಬೇಕೆಂಬ ಕಳಕಳಿಯ ಇಂಗಿತ ಸಂದೇಶವಿದೆ!

ಪರಹಿತಕ್ಕಾಗಿ ತಮ್ಮನ್ನು ತಾವಾಗಿಯೇ ತೊಡಗಿಸಿಕೊಳ್ಳುವ ಮಹಾತ್ಮರ ಪರಂಪರೆ ಹರಿದು ಬಂದಿದೆ. ಭರತಖಂಡವು "ಸಂತಮಹಂತರ ನಾಡು" ಎಂದು ಪ್ರಸಿದ್ಧ. ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನೆಲ್ಲೆಡೆ ಇಂತಹ ಮಹಾತ್ಮರನ್ನು ನಾವು ಕಾಣಬಹುದು. ಬಹುಶಃ ಇಂತಹ ಧನ್ಯಕುಸುಮಗಳಾದ ಸಂತರ ಹೆಸರುಗಳನ್ನು ಪಟ್ಟಿಮಾಡಿದರೆ ಅದೇ ದೊಡ್ಡ ಗ್ರಂಥವಾದೀತು! **ಮಾರ್ಗದ್ರುಮಾಃ ಮಹಾಂತಾಶ್ಚ ಪರೇಷಾಮೇವ ಭೂತಯೇ |** ದಾರಿಯ ಇಕ್ಕೆಡೆಗಳಲ್ಲಿರುವ ತರುಲತೆಗಳೂ ಮಹಾತ್ಮರೂ ಪರರ ಕಲ್ಯಾಣಕ್ಕಾಗಿಯೇ ಬದುಕುವವರು ಎನ್ನುವ ಮಾತು ನೂರಕ್ಕೆ ನೂರು ಸತ್ಯ! ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ, ಬುದ್ಧ, ಮಹಾವೀರ, ಗುರುನಾನಕ, ವಾಲ್ಮೀಕಿ, ವ್ಯಾಸಾದಿ ಹೆಸರುಗಳು ಇಂತಹ ಪರಂಪರೆಯ ದಾರಿಕಂಬಗಳು! ಇಂತಹ ದೀಪಸ್ತಂಭಗಳ ಶಾಶ್ವತ ಬೆಳಕು ನಮ್ಮಲ್ಲಿ ಬೆಳಕನ್ನು ಮೂಡಿಸಲಿ. ಆ ಬೆಳಕಿನ ದಾರಿಯಲ್ಲಿ ನಡೆಯೋಣ. ಭರತ ಖಂಡದ ಆದರ್ಶ ಪರಂಪರೆಯನ್ನು ಮುಂದುವರೆಸುವ ಹಣತೆ ದೀಪಗಳಾಗೋಣ.

**ಲೋಕಹಿತಂ ಕರಣೀಯಮ್** ಎಂಬ ಪರೋಪಕಾರದ ಧ್ಯೇಯಾದರ್ಶಗಳು ನಮ್ಮಲ್ಲಿ ಚಿಗುರಿ ಪರಾರ್ಥಕ್ಕಾಗಿ ಈ ಮಾನವ ಜೀವನವನ್ನು ಧನ್ಯತೆಯ ತೀರಕ್ಕೆ ಒಯ್ಯೋಣ! ಮಾತು ಗಳಿವು ಸಹ್ಯವಲ್ಲವೆ! ಈ ಮಾತುಗಳಿಂದ ಒಂದಿಷ್ಟು ಪ್ರೇರಣೆ ಪಡೆದರೆ ಕೃತಜ್ಞ.